# ಸಂಗಂ ಬೆಳುದಿಂಗಳು

ಕಾರ್ಪೊರೇಟ್ ಸ್ಪರ್ಶದ ಸಾಹಿತ್ಯದ ಹಬ್ಬಗಳು ರಾಜಧಾನಿ ನಗರಗಳು, ಮಹಾನಗರಗಳೊಂದಿಗೆ ತಳುಕು ಹಾಕಿಕೊಂಡಿರುತ್ತವೆ. ಇದಕ್ಕೆ ಅಪವಾದವೆನ್ನುವಂತೆ, ರಾಜಧಾನಿಯಿಂದ ದೂರವಿರುವ ಹಾಗೂ ಹಿತಕರ ಹವಾಮಾನಕ್ಕೆ ಪ್ರಸಿದ್ಧವಲ್ಲದ ಬಳ್ಳಾರಿಯಲ್ಲಿ, ಮಾನವೀಯ ಮಿಡಿತಗಳೇ ಮುನ್ನೆಲೆಯಲ್ಲಿ ಮಿನುಗುತ್ತಿರುವ ಅಂತರರಾಷ್ಟ್ರೀಯ ಕಾವ್ಯಮೇಳವೊಂದು ನಡೆಯುತ್ತಿದೆ.

ಬಳ್ಳಾರಿ ಬಿರುಬಿಸಿಲಿಗೆ ಪ್ರಸಿದ್ಧ. ಆದರೆ, ಈ ಬಾರಿಯ ಅಕ್ಟೋಬರ್‌ನಲ್ಲಿ ಬಿಸಿಲು ಅಥವಾ ಮಳೆಯನ್ನು ಮೀರಿದ ಬೆಳುದಿಂಗಳು ಬಳ್ಳಾರಿಯನ್ನು ಆವರಿಸಿಕೊಳ್ಳಲಿದೆ. ಅದು 'ಕಾವ್ಯ ಬೆಳುದಿಂಗಳು' – 'ಸಂಗಂ ಕಾವ್ಯ'ದ ಹೊನಲು.

ಮನಸ್ಸುಗಳನ್ನು ಕಟ್ಟುವುದು, ಆರ್ದ್ರಗೊಳಿಸುವುದು, ಮಾಗಿಸುವುದು ಕಾವ್ಯದ ಉದ್ದೇಶ. ಸಂಗಂ ಕಾವ್ಯ ಮೇಳದ ಹಂಬಲವೂ – ಜಾಗತಿಕ ಮಟ್ಟದಲ್ಲಿ ಏಕತೆ ಮತ್ತು ಬಂಧುತ್ವ ಮರುಸ್ಥಾಪಿಸುವುದೇ ಆಗಿದೆ. ಕೊರೊನೋತ್ತರ ಕಾಲದ ದಕ್ಷಿಣ ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕದಂತಹ ತೃತೀಯ ಜಗತ್ತಿನ ಹಲವು ಮನಸುಗಳನ್ನು ಒಳಗೊಳ್ಳುವ ಈ ಮಾನವೀಯ ಚಟುವಟಿಕೆ, ಬಹುತ್ವದ ಹುಡುಕಾಟವೂ ಆಗಿದೆ.

ಅಕ್ಟೋಬರ್ 21ರಿಂದ ಮೂರು ದಿನಗಳ ಕಾಲ ಬಳ್ಳಾರಿಯ ಬಿ.ಐ.ಟಿ.ಎಂ ಕಾಲೇಜಿನ ಸಭಾಂಗಣದಲ್ಲಿ, 'ಅರಿವು' ಟ್ರಸ್ಟ್ ನೇತೃತ್ವದಲ್ಲಿ ನಡೆಯುವ 'ಸಂಗಂ ಕವಿ ಸಮ್ಮೇಳನ'ದಲ್ಲಿ ವಿಶ್ವದ ವಿವಿಧ ದೇಶಗಳ ಕವಿಗಳೊಂದಿಗೆ, ಭಾರತದ ವಿವಿಧ ರಾಜ್ಯಗಳು ಮತ್ತು ಕರ್ನಾಟಕದ ಕವಿಗಳು ಭಾಗವಹಿಸಲಿದ್ದಾರೆ. ಮುಖ್ಯವಾಗಿ ಯುವ ತಲೆಮಾರಿನ ಕವಿಗಳ ಕಾವ್ಯಸಲ್ಲಾಪಕ್ಕೆ 'ಸಂಗಂ ಸಮ್ಮೇಳನ' ವೇದಿಕೆಯಾಗಲಿದೆ.

ನೈಜೀರಿಯಾದ ಖ್ಯಾತ ನಾಟಕಕಾರ್ತಿ ಪ್ರೊ. ಟೆಸ್ ಒನ್ವು ಉಮೆ ಅವರು 'ಸಂಗಂ 2022' ಸಮ್ಮೇಳನದಲ್ಲಿ ಆಶಯ ಭಾಷಣ ಮಾಡುವರು. ಕನ್ನಡದ ಎಚ್.ಎಸ್. ಶಿವಪ್ರಕಾಶ್, ಚಂದ್ರಶೇಖರ ಕಂಬಾರ, ಎಲ್. ಹನುಮಂತಯ್ಯ ಮುಂತಾದವರು ಕಾವ್ಯಮೇಳದಲ್ಲಿದ್ದಾರೆ.




ಸಂಗಂ ಕಾವ್ಯಮೇಳ ಬಳ್ಳಾರಿಯಲ್ಲಿ ನಡೆಯುತ್ತಿರುವುದಕ್ಕೆ ವಿಶೇಷ ಅರ್ಥವಿದೆ. ಬಳ್ಳಾರಿ ಹಂಪಿಗೆ ಸಮೀಪ. ಕನ್ನಡ ಸಂಸ್ಕೃತಿಯ ಬಯಲು ಪ್ರದರ್ಶನಶಾಲೆಯಂತಿರುವ ಹಂಪಿ, ಕನ್ನಡದ ಸ್ಮೃತಿಗಳು ಈಗಲೂ ಪಿಸುಗುಡುತ್ತಿರುವ ವಿಶಿಷ್ಟ ಸ್ಥಳ. ಕನ್ನಡ ಸಂಸ್ಕೃತಿ ಮತ್ತು ಕಾವ್ಯ ಪರಂಪರೆ ಎರಡನ್ನೂ ಪ್ರತಿನಿಧಿಸುವಂತಿರುವ ಹಂಪಿಯೊಂದಿಗೆ ತಳುಕು ಹಾಕಿಕೊಂಡಿರುವ ಕಾರಣದಿಂದಾಗಿ ಬಳ್ಳಾರಿಯಲ್ಲಿ ಕಾವ್ಯಮೇಳ ಆಯೋಜನೆಗೊಂಡಿರುವುದಕ್ಕೆ ವಿಶಿಷ್ಟ ಮಹತ್ವವಿದೆ. ಕನ್ನಡದ ಬಹುತ್ವ ಹಾಗೂ ಸಾಂಸ್ಕೃತಿಕ ಹೆಗ್ಗಳಿಕೆಗಳನ್ನು ವಿಶ್ವದ ಪ್ರತಿನಿಧಿಗಳಿಗೆ ಪರಿಚಯಿಸಲಿಕ್ಕೆ ಈ ಕವಿಮೇಳ ಸುಂದರ ನೆಪವೂ ಆಗಲಿದೆ.

ಸಂಪರ್ಕ: 9448918764. ಇ–ಮೇಲ್: sangamfestballari22@gmail.com
ವೆಬ್‌ಸೈಟ್: sangamfest22ballari.com